**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ 09.06.2026

**ಪಾಟೀ ಸವಾಲು:- ಶ್ರೀ ಎಲ್ ಎಸ್ ಹೆಚ್ ವಾದಿಯ ಪರ ವಕೀಲರಿಂದ**

1. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಗೆ ಮಾಹಿತಿಯನ್ನು ನನ್ನ ವಕೀಲರ ಕಡೆಯಿಂದ ನಾನೇ ಕೊಟ್ಟಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಇರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ಕೇಸ್ ಸಲ್ಲಿಸುವ ವೇಳೆಯಲ್ಲಿ ವಾದಿ ಮಲ್ಲಪ್ಪ ರವರು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ಕವಲಿ ಊರು ದೊಡ್ಡದಿದೆ ಹಾಗಾಗಿ ಎಲ್ಲಿ ವಾಸವಿದ್ದರು ಎಂದು ಗೊತ್ತಿಲ್ಲ. ವಾದಿ ಮಲ್ಲಪ್ಪ ರವರನ್ನು ನೋಡಿರುವುದಿಲ್ಲ. ವಾದಿ ಮಲ್ಲಪ್ಪ ರವರ ಹೆಂಡತಿ ಮಕ್ಕಳನ್ನು 15 ವರ್ಷಗಳ ಹಿಂದೆ ನೋಡಿದ್ದೇನೆ. ಈಗ ನೋಡಿಲ್ಲ. ಮಲ್ಲಪ್ಪ ರವರ ಕುಟುಂಬದವರನ್ನು ಕೌವಲಿ ಗ್ರಾಮದಲ್ಲಿ ನೋಡಿರುತ್ತೇನೆ. ಮಲ್ಲಪ್ಪ ರವರು 15 ವರ್ಷಗಳಿಂದ ಹಿಂದಿನಿಂದಲೂ ಎಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸಾಕ್ಷಿಯು ಸ. ನಂ. 160 ರಲ್ಲಿ 7 ನೇ ನಂಬರ್ ಸೈಟ್ ಕೊಟ್ಟಿದ್ದು, ಅದರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದು ಹೇಳಿದರು. ಸ. ನಂ. 160 ಮೂಲತಃ ಫಾರೆಸ್ಟ ಇಲಾಖೆಗೆ ಸೇರಿದ್ದಾಗಿರುತ್ತದೆ. ಸ. ನಂ. 160 ರಲ್ಲಿ 2 ಎಕರೆ ಇರುತ್ತದೆ. 1991-92 ರಲ್ಲಿ ತಹಶೀಲ್ದಾರ್ ರವರು ಸೈಟ್ ಮಾಡಿ ಕೊಟ್ಟಿರುತ್ತಾರೆ. ಸ. ನಂ. 160 ರಲ್ಲಿ ಸೈಟ್ ಹಂಚಿಕೆಗೆ ಸಂಬಂಧಿಸಿದಂತೆ ಎಮ್ ಆರ್ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ನಿವೇಶನ ಹಂಚಿಕೆಯ ಬಗ್ಗೆ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ನಕ್ಷೆಯಲ್ಲಿ ಸ. ನಂ. 160 ರಲ್ಲಿ ಎಷ್ಟು ನಿವೇಶನ ಆಗಿದೆ ಎಂದರೆ ಸಾಕ್ಷಿಯು 23 ಸೈಟ್ ಗಳು ಆಗಿದೆ ಎಂದು ಹೇಳಿದರು. ಸದರಿ ಸೈಟ್ ಗಳು ಯಾರಿಗೆ ಹಂಚಿಕೆ ಆಗಿದೆ ಎಂದು ದಾಖಲಾತಿ ಹಾಜರು ಪಡಿಸಿದ್ದೇನೆ. ಯಾರು ಯಾರಿಗೆ ಹಂಚಿಕೆ ಆಗಿದೆ ಎಂದು 23 ಜನರ ಹೆಸರು ಹೇಳಲು ಆಗುವುದಿಲ್ಲ. ಸ. ನಂ. 160 ರ ಸ್ವತ್ತು ಫಾರೆಸ್ಟ ಗೆ ಸೇರಿರುವ ಬಗ್ಗೆ ದಾಖಲಾತಿ ಹಾಜರು ಮಾಡಿಲ್ಲ. ಸ. ನಂ. 160 ರ ಚಕ್ಕು ಬಂದಿ ಪೂ- ಪಾರ್ವತಮ್ಮ ಕೋಂ ಈರಯ್ಯ, ಪ- ಗೌರಮ್ಮ ಕೋಂ ಚಂದ್ರಪ್ಪ, ದ- ಫಾರೆಸ್ಟ , ಉ- ರಸ್ತೆ ಇರುತ್ತದೆ.

2. ವಾದಿಗೆ ನೀಡಿರುವ 7 ನೇ ನಿವೇಶನದ ಚಕ್ಕು ಬಂದಿ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ಈಗಷ್ಟೆ ಹೇಳಿದೆ ಎಂದು ಹೇಳಿದರು. ಮೇಲೆ ಹೇಳಿದ ಚಕ್ಕು ಬಂದಿ ಸ. ನಂ. 160 ರದಾಗಿರುತ್ತದೆಯೇ ಹೊರತು ವಾದಿಗೆ ಕೊಟ್ಟಿರುವ ನಿವೇಶನದ ಚಕ್ಕು ಬಂಧಿ ಅಲ್ಲ ಎಂದರೆ ಸಾಕ್ಷಿಯು ವಾದಿಯ ಮನೆಯ ಚಕ್ಕು ಬಂದಿ ಹೇಳಿರುತ್ತೇನೆ ಎಂದು ಹೇಳಿದರು. ವಾದಿಗೆ ನಿವೇಶನ ನಂ. 7 ಹಂಚಿಕೆ ಆಗಿರುವ ಬಗ್ಗೆ 1991-92 ರ ಸಾಲಿನಲ್ಲಿ ಆಗಿರುವ ಎಮ್ ಆರ್ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಖಾನೆ ಸು. ನಂ. 7 ರ ಚಕ್ಕು ಬಂದಿ

ತೋರಿಸಲು ಯಾವ ದಾಖಲಾತಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದು ಹೇಳಿದರು. ನನಗೆ ಓದಲು ಬರುತ್ತದೆ. ಸಾಕ್ಷಿಗೆ ದಾಖಲಾತಿಗಳನ್ನು ಕೊಟ್ಟು ಅದರಲ್ಲಿ ಸ. ನಂ. 160 ಕ್ಕೆ ಸಂಬಂಧಿಸಿದ ದಾಖಲಾತಿ ಯಾವುದು ಎಂದು ಕೇಳಲಾಗಿ ಸಾಕ್ಷಿಯು ನಿಡಿ 4 ದಾಖಲಾತಿಯನ್ನು ತೋರಿಸಿದರು. ನಿಡಿ 4 ರಲ್ಲಿ ಸ. ನಂ. 160 ಎಂದು ಇರುವುದಿಲ್ಲ. ಸ. ನಂ. 160 ರ 7 ನೇ ನಿವೇಶನ ಎಂದು ನಮೂದು ಇದೆಯಾ ಎಂದರೆ  ಇಲ್ಲ ಎಂದು ಹೇಳಿದರು. ಸದರಿ ದಾಖಲಾತಿಯಲ್ಲಿ ಚಕ್ಕು ಬಂದಿ ಇರುವುದಿಲ್ಲ. ಸ. ನ. 160 ಕ್ಕೆ ಸಂಬಂದಪಟ್ಟ ದಾಖಲಾತಿ ಎಂದು ಒಂದು ದಾಖಲಾತಿಯನ್ನು ತೋರಿಸಿದರು, ಸದರಿ ದಾಖಲಾತಿ ಗುರುತು ಆಗಿರುವುದಿಲ್ಲ.

3. ನಾನು ಹಾಜರು ಪಡಿಸಿರುವ ನಿಡಿ 5 ರಲ್ಲಿ  ಯಾರು ಯಾರಿಗೆ ಸೈಟ್ ಹಂಚಲಾಗಿದೆ ಎಂದು ಮಾಹಿತಿ ಇರುವುದಿಲ್ಲ ಎಂದರೆ  ಸಾಕ್ಷಿಯು ಇದರಲ್ಲಿ ಇಲ್ಲ ಎಂದು ಹೇಳಿದರು.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು, ಸಮಯವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಶಿಕಾರಿಪುರ